1.20 ಪಿಎಂ

(5) ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್) ಮಾನ್ಯ ಅಧ್ಯಕ್ಷರೇ, ಸವಣೂರು ಪಟ್ಟಣದಲ್ಲಿ 35 ಸಾವಿರ ಜನಸಂಖ್ಯೆ ಇದೆ. ಅಲ್ಲಿ 15 ದಿವಸಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ಈ ಸಮಸ್ಯೆಯ ಬಗ್ಗೆ ಮಾನ್ಯ ಅಸಿಸ್ಟೆಂಟ್ ಕಮಿಶನರ್‌ರವರಿಗೆ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಕೂಡ ಮತ್ತು ಈ ಪಟ್ಟಣದ ಸಮಸ್ಯೆ ಬಗ್ಗೆ ಅವರಿಗೆ ಮೊದಲೇ ಗೊತ್ತಿದ್ದರೂ ಕೂಡ ಮತ್ತು ಈ ಸಮಸ್ಯೆ ಪರಿಹಾರಕ್ಕಾಗಿ ಸರ್ಕಾರದಿಂದ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದರೂ ಕೂಡ ಸಮಸ್ಯೆ ಪರಿಹಾರವಾಗಿಲ್ಲ. ಅದಕ್ಕಾಗಿ ಅಲ್ಲಿ ನೂತನ ಬೋರ್‌ವೆಲ್‌ಗಳು ಕೊರೆಯುವ ಸಲುವಾಗಿ ಮತ್ತು ಪೈಪ್‌ಲೈನ್‌ಗೆ ಒಂದೆರಡು ಮೋಟಾರ್‌ಗಳನ್ನು ತುರ್ತಾಗಿ ಖರೀದಿ ಮಾಡಬೇಕಾಗಿದೆ. ಅಲ್ಲಿ ಹಾಲಿ ಇರತಕ್ಕಂಥ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಕೂಡ ಕಡಿಮೆಯಾಗಿದೆ. ಹಾಲಿ 15 ದಿವಸಗಳಿಗೊಮ್ಮೆ ಕೊಡುತ್ತಿರುವ ನೀರೂ ಕೂಡ ಸವಳು ನೀರಾಗಿದೆ. ಅಲ್ಲಿ ಖಾಲಿ ಕೊಡಗಳ ಪ್ರದರ್ಶನವನ್ನೂ ಕೂಡ ಮಾಡಿದ್ದು ಅಲ್ಲಿಯ ಜನರು ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕು ಎನ್ನುವ ಆಲೋಚನೆಯಲ್ಲಿದ್ದಾರೆ. ಅನೇಕ ಸಭೆಗಳನ್ನು ಮಾಡಿದ್ದರೂ ಕೂಡ ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರಿಂದ ಆಗುತ್ತಿಲ್ಲ. ಆ ಕಾರಣದಿಂದ ತಕ್ಷಣ ನಗರಾಭಿವೃದ್ಧಿ ಇಲಾಖೆಯಿಂದ 10 ಲಕ್ಷ ರೂಪಾಯಿಗಳನ್ನು ಅಲ್ಲಿಗೆ ಮೋಟಾರ್ ಖರೀದಿ ಮಾಡುವುದಕ್ಕಾಗಿ ಮತ್ತು ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕಾಗಿ ಬಿಡುಗಡೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು: ಯಾರಾದರೊಬ್ಬರು ಸರ್ಕಾರದ ಪರವಾಗಿ ಉತ್ತರ ಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಉತ್ತರಿಸಲು ಇಲ್ಲಿ ಮಂತ್ರಿಗಳಿಲ್ಲ. ಇವರಿಗೆ ಯಾವ ಭಾಷೆಯಲ್ಲಿ ಹೇಳಬೇಕು ಹೇಳಿ. ತಾವೂ ಕೂಡ ಎಲ್ಲರಿಗೂ ಸದನದಲ್ಲಿ ಹಾಜರಿರಬೇಕೆಂದು ಹೇಳಿದ್ದೀರಿ. ಇಷ್ಟು ಹೇಳಿದ್ದರೂ ಕೂಡ ಕಡೇಪಕ್ಷ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಜರಿದ್ದು ಉತ್ತರ ಹೇಳುವಷ್ಟು ಸೌಜನ್ಯವಿಲ್ಲವೆಂದರೆ ಹೇಗೆ. ಇನ್ನು ಏನು ಹೇಳಬೇಕೋ ಗೊತ್ತಿಲ್ಲ.

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇರಬೇಕು ಎಂದೇನೂ ಇಲ್ಲ. ತಕ್ಷಣದಲ್ಲಿ ಯಾರಾದರೊಬ್ಬರು ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಕೇಳಿಕೊಂಡು ಅವರು ಉತ್ತರ ಕೊಟ್ಟಮೇಲೆ ನೀವು ಬೇಕಾದರೆ ಡೀಟೈಲ್ಸ್ ರಿಪ್ಲೈಯನ್ನು

ಪಡೆಯಬಹುದಾಗಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಇವೊತ್ತೇ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಮಾನ್ಯ ಅಧ್ಯಕ್ಷರೇ, ನಾನು ಮಾಹಿತಿಯನ್ನು ಕೇಳುತ್ತಿಲ್ಲ.

ಅಧ್ಯಕ್ಷರು: ನಾನು ನಿಮ್ಮ ಸಮಸ್ಯೆ ಏನೆಂಬುದನ್ನು ಹೇಳುತ್ತೇನೆ, ನೀವು ಕುಳಿತುಕೊಳ್ಳಿ, ಮಂಜುನಾಥ್‌ರವರು ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ತಕ್ಷಣಕ್ಕೆ 10 ಲಕ್ಷ ರೂಪಾಯಿಗಳನ್ನು ಅಲ್ಲಿಗೆ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಇರತಕ್ಕಂಥ ಏರ್ಪಾಡನ್ನು ಮಾಡುತ್ತೇನೆ.

(6) ಚಿಂಚೋಳಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ಈ ರೈತರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಈ ಸದನದಲ್ಲಿ ಬಹಳಷ್ಟು ಸಲ ಚರ್ಚೆಗೆ ಬಂದಿದೆ. ಅಂಥ ಒಂದು ಘಟನೆ ಮೊನ್ನೆ ಚಿಂಚೋಳಿಯಲ್ಲಿ ಆಗಿದ್ದು ಪತ್ರಿಕೆಗಳಲ್ಲಿಯೂ ಕೂಡ ಅದು ಬಂದಿದೆ. ಸರ್ಕಾರದವರು ಸದನ ಸಮಿತಿಯನ್ನು ರಚಿಸಿದ್ದಾರೆ. ಈ ಜಂಟೀ ಸದನ ಸಮಿತಿ ಭೇಟಿ ಕೊಟ್ಟು ಹೋಗಿ ಬಂದಿದ್ದರೂ ಕೂಡ ಇಲ್ಲಿಯವರೆವಿಗೆ ರಿಪೋರ್ಟ್‌ನ್ನು ಕೊಟ್ಟಿಲ್ಲ. ಆದರೆ ಆ ವರದಿ ಬಂದಮೇಲೆ ಏನು ಕ್ರಮ ಜರುಗಿಸುತ್ತಾರೋ ನೋಡೋಣ. ಇದರ ಬಗ್ಗೆ ಕಂದಾಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಜಂಟೀ ಸದನ ಸಮಿತಿಯನ್ನು ರಚಿಸಿದ್ದೇವೆ. ಅವರಿಗೆ ಆದಷ್ಟು ಬೇಗ ವರದಿಯನ್ನು ಕೊಡಬೇಕೆಂದು ತಿಳಿಸಿದ್ದ ಕಾರಣ ಈಗ ವರದಿಯನ್ನು ಕೊಟ್ಟಿರಬಹುದು ಎಂದು ಕಾಣಿಸುತ್ತದೆ. ಆ ವರದಿ ಬಂದ ತಕ್ಷಣ ಅದನ್ನು ಪರಿಶೀಲನೆ ಮಾಡಿ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(7) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆ ಕಾರ್ಯಕ್ರಮ

+ ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ 26ನೇ ತಾರೀಖು ಭಾನುವಾರ ನಿವೇಶನಗಳ ಹಂಚಿಕೆ ಕಾರ್ಯಕ್ರಮವನ್ನು ನಿಶ್ಚಯ ಮಾಡಿದ್ದಾರೆ. ಈಗಾಗಲೇ ಈ ಹಿಂದೆಯೇ ಇದರ ಬಗ್ಗೆ